ಶಾದಿ ಮಹಲ್‌ಗಳ ಕುರಿತು

5305 (5744); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) ರಾಜ್ಯದಲ್ಲಿ ಅಪೂರ್ಣವಾಗಿರುವ ಶಾದಿಮಹಲ್ ಕಟ್ಟಡಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಅವುಗಳನ್ನು ಕಟ್ಟಿ ಮುಗಿಸಲು ಎಷ್ಟು ಅನುದಾನ ಅವಶ್ಯಕತೆ ಇದೆ;

ಇ) 2013–14, 2014–15ನೇ ಸಾಲಿನಲ್ಲಿ ಕಟ್ಟಲು ಉದ್ದೇಶಿಸಿರುವ ಶಾದಿಮಹಲ್‌ಗಳ ಸಂಖ್ಯೆ ಎಷ್ಟು; ಅವು ಯಾವುವು; ಯಾವ ಹಂತದಲ್ಲಿವೆ;

ಈ) 2015–16ನೇ ಸಾಲಿನಲ್ಲಿ ಶಾದಿಮಹಲ್ ಕಟ್ಟಲು ಎಷ್ಟು ಅನುದಾನ ನಿಗಧಿ ಮಾಡಲಾಗಿದೆ;

ಉ) ಹಿರೇಕೆರೂರು ತಾಲ್ಲೂಕಿನಿಂದ ಶಾದಿಮಹಲ್ ಕಟ್ಟಲು ಬಂದಿರುವ ಪ್ರಸ್ತಾವನೆಗಳು ಎಷ್ಟು; ಅವು ಯಾವುವು;

ಊ) ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗುವುದು;

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ರಾಜ್ಯದಲ್ಲಿ 210 ಶಾದಿಮಹಲ್ ಕಟ್ಟಡಗಳು ಅಪೂರ್ಣಗೊಂಡಿರುತ್ತವೆ. ಸಂಸ್ಥೆಗಳ ವಿವರ "ಅನುಬಂಧ–1" ರಲ್ಲಿ ಲಗತ್ತಿಸಿದೆ.

ಆ) ಅಂದಾಜು ರೂ. 6211.26 ಲಕ್ಷಗಳು ಅವಶ್ಯಕತೆ ಇದೆ.

ಇ) 2013–14 & 2014–15ನೇ ಸಾಲಿನಲ್ಲಿ ಶಾದಿಮಹಲ್ ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಸಂಸ್ಥೆಗಳ ವಿವರ 'ಅನುಬಂಧ–2' ರಲ್ಲಿ ಲಗತ್ತಿಸಿದೆ.

ಈ) 2015–16ನೇ ಸಾಲಿನಲ್ಲಿ ಶಾದಿಮಹಲ್ ಕಟ್ಟಲು ರೂ. 400.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಉ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಿಂದ ಮೈಸೂರು, ರಟ್ಟಿಹಳ್ಳಿ, ಹಂಸಭಾವಿ ಮತ್ತು ಹಿರೇಕೆರೂರು ಟೌನ್‌ನಿಂದ ಪ್ರಸ್ತಾವನೆಗಳು ಬಂದಿವೆ.

ಊ) ಹಾವೇರಿ ಜಿಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಮೈಸೂರು, ರಟ್ಟಿಹಳ್ಳಿ ಮತ್ತು ಹಿರೇಕೆರೂರು ಟೌನ್ ಶಾದಿಮಹಲ್‌ಗಳಿಗೆ ಈಗಾಗಲೆ ಅನುದಾನ ಮಂಜೂರು ಮಾಡಲಾಗಿದೆ.

ಮಸೀದಿಗಳ ದುರಸ್ಥಿ ಹಾಗೂ ನಿರ್ಮಾಣ

5306 (5745); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) 2013–14 ಹಾಗೂ 2014–15ನೇ ಸಾಲಿನಲ್ಲಿ ಮಸೀದಿಗಳ ದುರಸ್ಥಿ ಹಾಗೂ ನಿರ್ಮಾಣಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ; ಅವು ಯಾವುವು;

ಆ) 2015–16ನೇ ಸಾಲಿನಲ್ಲಿ ಇದಕ್ಕಾಗಿ ನಿಗದಿ ಪಡಿಸಿದ ಹಣ ಎಷ್ಟು;

ಇ) 31.10.2015ರವರೆಗೆ ಯಾವ ಯಾವ ಮಸೀದಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ;

ಈ) ಹಿರೇಕೆರೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳಿಂದ ಇದಕ್ಕಾಗಿ ಪ್ರಸ್ತಾವನೆ ಬಂದಿದೆ;

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) 2013–14 ಹಾಗೂ 2014–15ನೇ ಸಾಲಿನಲ್ಲಿ ಮಸೀದಿಗಳ ದುರಸ್ತಿ ಹಾಗೂ ನಿರ್ಮಾಣಕ್ಕೆ ಖರ್ಚು ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.